R No KANN 12

14-3-1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಸ್ವಾಮಿಗಳು ಆರಮನೆ ಕಿರಸ್ತೇದಾರ್ ಎಂ. ವಿ. ಸುಬ್ಬಯ್ಯ ಸಂಪಾದಕರು ವ್ಯವಸ್ಥಾಪಕರು ಎಂ. ಎಸ್. ಕೃಷ್ಣ 8

ದೇವಾಲಯ ಗೋಡೆ ಕುಸಿದು 25 ಮಂದಿಯ ಸಾವು

ಅಗ್ನಿ ಅನಾಹುತ

ಗೌಹತಿ — ನಗರದ ಒಲ್ಡ್‌ಕಾರಿ ಭಾಗದಲ್ಲಿ ಅಗ್ನಿ ಅನಾಹುತದಿಂದ ಸಾವಿರ ಮನೆಗಳು ನಾಶವಾಗಿ 5000 ಜನ ವಸತಿ ಇಲ್ಲದವರಾಗಿರುವರು.

○

ಪ್ರಧಾನಿಯವರ ಸಾಕ್ಷ್ಯ

ಅಲಹಾಬಾದು — ಪ್ರಧಾನಿ ಇಂದಿರಾ ರವರ ವಿರುದ್ಧ ಶ್ರೀ ರಾಜನಾರಾಯಣರು ಹಾಕಿರುವ ಅರ್ಜಿ ಸಂಬಂಧದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸಾಕ್ಷ್ಯವು ಅಲಹಾಬಾದ್ ಹೈಕೋರ್ಟಿನಲ್ಲಿ ಬಹಿರಂಗವಾಗಿ ತಾ|| 18 ರಿಂದ 20 ರ ವರೆಗೆ ತೆಗೆದುಕೊಳ್ಳಲಾಗುವದೆಂದು, ಕೋರ್ಟ್ ಸಭಾಂಗಣಕ್ಕೆ ಲಾಯರು ಪ್ರವೇಶಕೆ ಯಾವ ನಿರ್ಬಂಧವೂ ಇಲ್ಲವೆಂದು ಹೈಕೋರ್ಟ್ ನ್ಯಾಯಾಧೀಶ ಶ್ರೀ ಜೆ ಎಂ ಎಲ್ ಸಿನ್ಹರು ತಿಳಿಸಿರುವರು

★

ಭೂಟ್ಟೋಗೆ ಎಚ್ಚರಿಕೆ

ನವ ದೆಹಲಿ — ಕಾಶ್ಮೀರದ ವಿಚಾರದಲ್ಲಿ ಪಾಕೀಸ್ತಾನವು ಹೆಚ್ಚು ಎಚ್ಚರಿಕೆಯಿಂದ ವುದಾಗಿಯೂ, ಕಾಶ್ಮೀರವು ಅದರ ಕೈಲಿ ತನ್ನೂಟ್ಟಂಪ್ ಆಗಿಲ್ಲವೆಂದು ಭೂಟ್ಟೋರನ್ನು ಎಚ್ಚರಿಸುವ ವಿಚಾರ ರಾಜ್ಯಸಭೆಯಲ್ಲಿ ತಿಳಿಸಲಾಯಿತು

★

ಸಭಾತ್ಯಾಗ

ಮೈಸೂರು — ವಿಶ್ವವಿದ್ಯಾಲಯದ ಸೆನೇಟು 75–76 ರ ರೂ. 18 28 ಲಕ್ಷ ಹೋತಾ ಅಂದಾಜರಟ್ಟಿಗೆ ಒಪ್ಪಿಗೆ ನೀಡಿದೆ ಸಭೆಯಲ್ಲಿ ಕೋರಂ ಇಲ್ಲವೆಂದು ಪ್ರತಿಭಟಿಸಿ, ಶ್ರೀ ಕೆ ಎನ್ ಶಿವಲಿಂಗಯ್ಯ ಸದಸ್ಯರು ಸಭಾತ್ಯಾಗ ಮಾಡಿದರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಫ್ರೋ ದ್ರಾವಿಡ ಭಾಷೆ ತೆರೆಯಲು ಸೆನೇಟ್ ಒಪ್ಪಿಕೆ ಸಡಿಲ ಮಾಡುವುದಿಲ್ಲ

ನವ ದೆಹಲಿ — ಈ ವರ್ಷ-ಜಾರಿಗೆ ತರಲಾದ ಕಳ್ಳ ಸಾಗಾಣಿಕೆ ಪ್ರಯತ್ನದ ವಿರುದ್ಧದ ಕಾರ್ಯಗಳಲ್ಲಿ ಸಡಿಲಗೊಳಿಸುವ ವಿಚಾರವೇ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ಹಾಸಿಗೆ ವ್ಯವಸ್ಥೆ

ಟೀಹಾನ್ — ರಷ್ಯಾದ ಮಹಿಳಾ ಬಾಸ್ಕೆಟ್ ಬಾಲ್ ಆಟಗಾರ್ತಿ ಜೂಲಿಯನ್ನಾ ಸೆಮಿಯೋನೋವಳು ಆರು ಅಡಿ ಹನ್ನೊಂದು ಅಂಗುಲ ಇದ್ದು ಅವಳಿಗೆ ಮಿಲಾನ್ ಹೋಟಲಿನಲ್ಲಿ ಸರಿಯಾದ ಹಾಸಿಗೆ ಇರದಿರಲು ಬೇರೊಂದು ಹಾಸಿಗೆಯನ್ನು ಅಡ್ಡಲಾಗಿ ಹಾಸಿ ಅನುಕೂಲಪಡಿಸಲಾಯಿತು.

●

ಪೂರ್ತಾ ನೆರವು ನೀಡಿಕೆ

ಬೆಂಗಳೂರು — ರಾಜ್ಯದಲ್ಲಿ ನೆರವಿನಿಂದ ನಡೆಯುವ ಕಾಲೇಜುಗಳು ಇನ್ನು ಮುಂದೆ ಪೂರ್ತಾ ಭಾಗ ಶೇಕಡ 80 ಪಡೆಯುವುದಾಗಿ ವಿಜ್ಞಾ ಮಂತ್ರಿಗಳು ಒಂದು ಸಮಾರಂಭದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು

★

ಅಕ್ಷೇಪಣೆ

ಮಂಗಳೂರು — ಕನ್ನಡ ಚಲನಚಿತ್ರಗಳಿಗೆ ಸಹಾಯಧನ ಹೆಚ್ಚಿಸಿರುವ ಬ್ಯಾಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ತೀವ್ರ ಆಕ್ಷೇಪಿಸಿ, ಅರ್ಥಮಂತ್ರಿಗಳಿಗೆ ಮನವಿ ಅರ್ಪಿಸಿದ್ದಾರೆ

●

ಬಳಕದಾರರ ಅಂಗಡಿ

ಬೆಳಗಾಂ — ಪೌರಸಭೆ ಬಳಕೆದಾರರ ಅಂಗಡಿ ನಡೆಸಲು ನಿರ್ಧರಿಸಿದೆ

ನಕ್ಸಲಿಗಳ ಕೊಲೆ

ಹೈದರಾಬಾದು — ಕಳೆದ 6 ವರ್ಷಗಳಲ್ಲಿ ನೂರಹತ್ತು ಮಂದಿ ನಕ್ಸಲಿಗಳನ್ನು ಗುಂಡುಹೊಡೆದೂ ಕೊಲ್ಲಲಾಗಿದೆ ಎಂದು ಶಾಸನ ಸಭೆಯಲ್ಲಿ ತಿಳಿಸಲಾಯಿ ರು. 2184 ಮಂದಿಯನ್ನು ದಸ್ತಗಿರಿ ಮಾಡಲಾಯಿತೆಂದು ತಿಳಿಸಲಾಯಿತು.

★

ಟಿಕೆಟ್‌ರಹಿತ ಪ್ರಯಾಣಿಕರು

ಹುಬ್ಬಳ್ಳಿ — ಜನವರಿಯಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡಿದ 9958 ಜನರಿಂದ ರೂ 2 8 ಲಕ್ಷ ವಸೂಲಾಗಿದೆ

○

25 ಜನರ ಮರಣ

ತಿರುಚಿ — ಕೊರಕವಾಗಿ ಗಾಯವುದ ಅಂಗಾಲಿನ್ನುಪ ಉತ್ಸವದಲ್ಲಿ ಗುಂಪಿನ ಮೇಲೆ ದೇವಾಲಯದ ಗೋಡೆ ಕುಸಿದು 25 ಮಂದಿ ಸತ್ತು 100 ಮಂದಿ ಗಾಯಗೊಂಡಿದ್ದಾರೆ.

○

ನಾಲ್ವರ ಸಜೀವ ಸಮಾಧಿ

ಶಿಲಾಂಗ್ — ಗಾರೋ ಬೆಟ್ಟಗಳಲ್ಲಿ ರಸ್ತೆ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ಮಣ್ಣು ಮತ್ತು ಬಂಡೆ ಉರುಳಿ ನಾಲ್ವರು ಸಜೀವ ಸಮಾಧಿ ಆಗಿ ನಾಲ್ವರು ಗಾಯಗೊಂಡರು.

★

ಅವಿಶ್ವಾಸ ಸೂಚನೆ

ನವ ದೆಹಲಿ — ಲೋಕಸಭೆಯ ಸ್ಪೀಕರಾಗಿರುವ ಶ್ರೀ ಧಿಲ್ಲಾನರ ಮೇಲೆ ಅವರ ಪದವಿಯನ್ನು ಕೀಳುಗೊಳಿಸಿದರೆಂದೂ ಅವಿಶ್ವಾಸ ಸೂಚನೆಯ ನೋಟೀಸು ಕೊಟ್ಟಿರುವರು

ಏಕತೆ ವ್ಯಕ್ತತೆ

ಪೌನಾರ್ (ವಾರ್ಧಾ) — ಸರ್ವ ಸೇವಾ ಸಂಘದ ಕಾರ್ಯಕಾರಿ ಸಮಿತಿಯು 24 ಮಂದಿಯಲ್ಲಿ ಅದರ ಅಧ್ಯಕ್ಷ ಶ್ರೀ ಸಿದ್ಧಾರ್ಥದಾಕರೂ ಸೇರಿ 21 ಮಂದಿಯು ಶ್ರೀ ಜಯಪ್ರಕಾಶನಾರಾಯಣರ ಜನತಾ ಚಳುವಳಿ ಕುರಿತು ಏಕತೆ ವ್ಯಕ್ತಪಡಿಸಿ ಸಂಘಕ್ಕೆ ರಾಜೀನಾಮೆ ಅರ್ಪಿಸಿದರು.

●

ಶಿವರಾತ್ರಿ ಮಹೋತ್ಸವ

ಮಹಾ ಶಿವರಾತ್ರಿ ಮಹೋತ್ಸವವು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವೈಭವವಾಗಿ ಆಚರಿಸಲಾಯಿತು ಸಹಸ್ರಾರು ಭಕ್ತರು ಆಗಮಿಸಿದ್ದರು ಕೆಲವು ಭಕ್ತ ಮಹಾಶಯರಿಗೆ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮಂಗಳವಾರ ಅಖಿಲ ಭಾರತ ಜ್ಞಾನಬೋಧ ಸಭೆಯ ಎದಡನೆ ಅಧಿವೇಶನ ವಿಜ್ಞಾಂಭಣೆಯಿಂದ ನೆಗವೇರಿತು ಶ್ರೀ ಸ್ವಾಮೀಜಿಯವರು ಜ್ಞಾನಬೋಧಕ ಭಾಷಣ ಮಾಡಿದರು

●

ಬೀಗಮುದ್ರೆ

ಸರ್ಕಾರ ಭತ್ತ ದಾಸ್ತಾನು ಮಾಡಿರುವ ಒಂದು ಸೊಸೈಟಿಯಲ್ಲಿ ಹೊರುಗಟ್ಟಿಕೆ ಭತ್ತದ ಚೀಲಗಳನ್ನು ತೆಗೆದುಕೊಂಡು ಆ ವೆಗಳ ಬದಲು ಹೊಟ್ಟು ತುಂಬಿದ ಚೀಲ ಇರುವುದು ಕಂಡುಬರಲು ಆ ಗೋಡೌನ್‌ಗಳನ್ನು ಬೀಗಮುದ್ರೆ ಮಾಡಲಾಗಿರುವ ದಾಗಿ ಶಿವಮೊಗ್ಗಾ ವಾರ್ತೆ

★

ವಿಶ್ವ ಎಲ್ಲ ಸ್ವಾತಂತ್ರ್ಯಕ್ಕೆಂಥಲೂ, ನವಗೆ ತಿಳಿಯಲು, ಯೋಚಿಸಲು, ನಂಬಲು ಹಾಗೂ ನನ್ನ ಅತ್ಯ ಸಾಕ್ಷಿಯಂತೆ ಹೇಳಲು ನನಗೆ ಸ್ವಾತಂತ್ರ್ಯ ಕೊಡಿ.

— ಮಿಲ್ಟನ್

(2)

ಮುನಿಸಿಪಲ್ ಕ್ರೈಸ್ ನೋಟು

ಮೈಸೂರು ನಗರದ ಉತ್ತರ ಭಾಗದಲ್ಲಿರುವ ನಗರ ಸಭೆಯ ನೋಕ್ಯಾನಿಕಲ್ ಪ್ಲಾಂಟಿಗೆ ಹೋಗುವ ಒಳಚರಂಡಿ ನೀರನ್ನು ಅಕ್ರಮವಾಗಿ ಕೆಲವು ತೋಟಗಾರರು ಪೈಪುಗಳನ್ನು ಒಡೆದು ತಮ್ಮ ತೋಟಗಳಿಗೆ ಉಪಯೋಗಿಸುತ್ತಿರುವದನ್ನು ಪತ್ತೆ ಹಚ್ಚಿ, ಐದು ಜನರ ಮೇಲೆ ದಾಕಲಾಗಿದ್ದ ಮೊಖದ್ದಮೆಗಳಲ್ಲಿ ಅವರಿಗೆ ಶಿಕ್ಷೆ ವಿಧಿಸಲಾಯಿತೆಂದೂ ತಿಳಿಸಿ, ಮುಂದೆ ಈ ರೀತಿ ಪೈಪುಗಳನ್ನು ಅಕ್ರಮವಾಗಿ ಒಡೆಯುವವರನ್ನು ಉಗ್ರವಾಗಿ ಶಿಕ್ಷಿಸುವುದೂ ಅಲ್ಲದೆ ಪ್ಲಾಂಟಿನಲ್ಲಿ ಆಗುವ ನಷ್ಟವನ್ನು ಅವರಿಂದ ವಸೂಲ್ಮಾಡಲಾಗುವುದೆಂದೂ ಮುನಿಸಿಪಲ್ ಕಮಿಷನರ್ ಶ್ರೀ ಸ್ವತಂತ್ರರಾವ್ ರವರು ಶ್ರುತಪಡಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆ ಅದ್ಭುತ ಹುದಿ

ಬೆಂಗಳೂರು— ದೇಶದಾದ್ಯಂತ ಎಲ್ಲಾ ವಿರೋಧ ರಾಕ್ಷಸರೂ ಪ್ರಧಾನಿ ಇಂದಿರಾರನ್ನು ಅವರ ಪದವಿಯಿಂದ ತೆಗೆಯಲೇಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರುವಾ ಘೋಷಿಸಿದರು.

ಪುರುಷನ ಹೊಟ್ಟೆಯಲ್ಲಿ ಗರ್ಭಕೋಶ

ಗುಲ್ಬರ್ಗದ ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಓರ್ವ 22 ವರ್ಷದ ಚಂಪ್ರಕಾಂತನೆನ್ನುವನ ಹೊಟ್ಟೆಯಲ್ಲಿ ಗರ್ಭಕೋಶವಿತ್ತು ; ಡಾಕ್ಟರರು ಆಪರೇಷನ್ ಮಾಡಿ ಹೊರಕ್ಕೆ ತೆಗೆದರು ; ಸ್ತ್ರೀಜನನೇಂದ್ರಿಯದ ಎಲ್ಲಾ ಭಾಗಗಳೂ ಈ ಗರ್ಭಕೋಶದಲ್ಲಿದ್ದವು.

ತಿಮಿಂಗಿಲಗಳ ರಕ್ಷಣೆ

ಥೆನೆನಾಲ್ — ತಿರುವಾರಪುರದಲ್ಲಿ ಪಂಬಾನದಿಯ ಸುಪೋಡಾ ಶಾಖೆಯಲ್ಲಿ ಅಪೂರ್ವ ತಿಮಿಂಗಿಲಗಳನ್ನು ರಕ್ಷಿಸಲು ಒರಿಸ್ಸಾ ಸರಕಾರ ನಿರ್ಧರಿಸಿದೆ.

ವುಡ್‌ಲಾಂಡ್ 14 3 75 ರಿಂದ

ಅಮೋಘ 3 ನೇ ವಾರ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನ 3 ಪ್ರದರ್ಶನಗಳು

ಅಪೆರಾ 14 3 75 ರಿಂದ

ಪಣಕೋಟಿಂ

★

ಅಮೋಘ ತಮಿಳು ಚಿತ್ರ

ಹೊಸ ಕಾಪಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

– Humanitarian Propogand Monthly ....

Edited Printed and Published by Bharatiya Gosamrakshana M S Krishna Rao (Proprietor of the Sahitya Chamarajapuram Mysore